ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1100(1517)
ಸದಸ್ಯರ ಹೆಸರು ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ)
ಉತ್ತರಿಸುವ ಸಚಿವರು ಶ್ರೀ ಡಿ ಟಿ ಜಯಕುಮಾರ್(ವಸತಿ ಸಚಿವರು)

ಅ) ಚಾಮರಾಜ ಪೇಟೆ ವಿದಾನ ಸಭಾ ಕ್ಷೇತ್ರದ ಮರು ಚುನಾವಣೆ ಸಂದರ್ಭದಲ್ಲಿ ಕೊಳಗೇರಿ ನಿವಾಸಿಗಳಿಗೆ ಅಕ್ಟೋಬರ್ 2, 2006 ಒಳಗೆ ಹಕ್ಕು ಪತ್ರಗಳನ್ನು ವಿತರಿಸುತ್ತೇವೆ ಎಂದು ನೀಡಿದ ಆಶ್ವಾಸನೆಯನ್ನು ಈಡೇರಿಸಲಾಗಿದೆಯೇ?

ಇಲ್ಲ, ಆದರೆ ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಹಕ್ಕುಪತ್ರ ವಿತರಣೆ ಬಗ್ಗೆ ಸರ್ಕಾರವು ದಿನಾಂಕ 18-10-2004ರಲ್ಲಿ ಮಂಡಳಿಯ ಕಾಯ್ದೆಗೆ ತಿದ್ದುಪಡಿ ಮಾಡಿ ಅಂತಿಮ ಅಧಿಸೂಚನೆ ಹೊರಡಿಸಿದ್ದು ಈ ಅಧಿಸೂಚನೆಯನ್ವಯ ಹಕ್ಕುಪತ್ರ ನೀಡುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿ ಸರ್ಕಾರದ ಪತ್ರದ ಸಂಖ್ಯೆ ವಇ/17/ಕೊಮಂಇ/2005 ದಿನಾಂಕ 4-4-2006ರ ನಿರ್ದೇಶನದಲ್ಲಿ ಸರ್ಕಾರ/ನಗರ ಸಭೆ/ಪ್ರಾಧಿಕಾರ/ಪುರಸಬೆ ಭೂ ಏಜೆನ್ಸಿಯವರೇ ಹಕ್ಕುಪತ್ರ ನೀಡಬಹುದೆಂದು ಮತ್ತು ಖಾಸಗಿ ಒಡೆತನಕ್ಕೆ ಸೇರಿರುವ ಪ್ರದೇಶಗಳಲ್ಲಿನ ನಿವಾಸಿಗಳಿಗೆ ಸದರಿಯವರು ವಾಸವಾಗಿರುವ ಮನೆ/ಗುಡಿಸಲಿನ ಚೆಕ್ಕುಬಂದಿಯನ್ನು ನಮೂದಿಸಿ ಪರಿಚಯ ಪತ್ರಗಳನ್ನು ನೀಡುವಂತೆ ತಿಳಿಸಲಾಗಿರುತ್ತದೆ ಅದರಂತೆ ಮಂಡಳಿಯು ಕ್ರಮವಹಿಸಲಾಗುವುದು

ಆ) ಕೊಳಗೇರಿ ನಿವಾಸಿಗಳಿಗೆ ವಿತರಿಸಿರುವ ಸ್ವಾಧೀನ ಪತ್ರಕ್ಕೆ ಕಾನೂನಿನ ಬೆಂಬಲ ಇಲ್ಲ ಎನ್ನುವುದು ಸರಿಯೇ?

ಕೊಳಗೇರಿ ನಿವಾಸಿಗಳಿಗೆ ನೀಡಲಾಗಿರುವ ಸ್ವಾಧೀನ ಪತ್ರವು ಸದರಿಯವರು ಆ ಪ್ರದೇಶದಲ್ಲಿ ವಾಸಿಸುತ್ತಿರುತ್ತಾರೆ ಎಂಬುದಕ್ಕೆ ಮಾತ್ರ ಸೀಮಿತವಾಗಿರುತ್ತದೆ ಆದರೆ ಸದರಿ ನಿವಾಸಿಗಳು ವಾಸಿಸುತ್ತಿರುವ ಗುಡಿಸಲು/ಮನೆಯ ಜಾಗದ ಮೇಲೆ ಯಾವುದೇ ರೀತಿಯ ಹಕ್ಕು ಇರುವುದಿಲ್ಲ

ಇ) ಹಾಗಿದ್ದಲ್ಲಿ, ಅವರಿಗೆ ಹಕ್ಕುಪತ್ರಗಳನ್ನು ಯಾವಾಗ ವಿತರಿಸಲಾಗುವುದು?

ಸರ್ಕಾರದ ಪತ್ರ ಸಂಖ್ಯೆ ವಇ/17/ಕೊಮಂಇ/2005 ದಿನಾಂಕ 4-4-2006ರಲ್ಲಿ ನಿರ್ದೇಶನ ನೀಡಿರುವಂತೆ ನಿವಾಸಿಗಳು ವಾಸಿಸುತ್ತಿರುವ ಪ್ರದೇಶವು/ಜಾಗವು ಸ್ಥಳೀಯ ಸಂಸ್ಥೆಗಳ ಒಡೆತನಕ್ಕೆ ಸೇರಿದ್ದಲ್ಲಿ ಅಂತಹ ಸ್ಥಳೀಯ ಸಂಸ್ಥೆಗಳೇ ಹಕ್ಕು ಪತ್ರಗಳನ್ನು ನೀಡಬಹುದಾಗಿದೆ ಆದರೆ ಘೋಷಿತ ಖಾಸಗಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಸದರಿಯವರು ವಾಸಿಸುತ್ತಿರುವ ಮನೆ/ಗುಡಿಸಲಿನ ವಿಸ್ತೀರ್ಣದ ಚಕ್ಕುಬಂಡಿ ನಮೂದಿಸಿ ಪರಿಚಯ ಪತ್ರ ನೀಡಲು

ಸರ್ಕಾರವು ನಿರ್ದೇಶನ ನೀಡಿದ್ದು, ಅದರನ್ವಯ ಮಂಡಳಿಯು ಕ್ರಮ ವಹಿಸಲಾಗುತ್ತಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1105(1431)**
ಸದಸ್ಯರ ಹೆಸರು **ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ)**
ಉತ್ತರಿಸುವ ಸಚಿವರು **ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು)**

ಅ) ಆವಾಹರಲಾಲ್ ನೆಹರು ನಗರ ಪುನರ್‌ಜ್ಜೀವನ ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಬಡವರಿಗೆ ಕಟ್ಟಲಿರುವ ಮನೆಗಳ ಸಂಖ್ಯೆ ಎಷ್ಟು?

ಜೆ ಎನ್ ಎನ್ ಯು ಆರ್ ಎಂ ಯೋಜನೆಯಡಿಯಲ್ಲಿ 2006–2007ರಲ್ಲಿ ಸ್ವೀಕೃತವಾಗಿರುವ / ಅನುಮೋದನೆಯಾಗಿರುವ 2 ಯೋಜನಾ ವರದಿಗಳ (DPR) ಪ್ರಕಾರ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯವರಿಂದ ಬೆಂಗಳೂರು ನಗರದಲ್ಲಿ 11 603 ಮನಗಳು ಹಾಗೂ ಮೈಸೂರು ನಗರದಲ್ಲಿ 2,788 ಮನೆಗಳನ್ನು ನಿರ್ಮಿಸಲು ಯೋಜಿಸಲಾಗಿದೆ

ಆ) ಈ ಮನೆಗಳನ್ನು ಯಾವ ಪ್ರದೇಶದಲ್ಲಿ ಕಟ್ಟಲಾಗುವುದು?

ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯವರು ಬೆಂಗಳೂರು ನಗರದಲ್ಲಿ 30 ಆಯ್ದ ಕೊಳಚೆ ಪ್ರದೇಶಗಳಲ್ಲಿ ಹಾಗೂ ಮೈಸೂರು ನಗರದಲ್ಲಿ 20 ಆಯ್ದ ಕೊಳಚೆ ಪ್ರದೇಶಗಳಲ್ಲಿ ಮನೆಗಳನ್ನು ನಿರ್ಮಿಸಲಾಗುವುದು

ಇ) ಪ್ರತಿ ಮನಯ ವೆಚ್ಚವೆಷ್ಟು?

ಕರ್ನಾಟಕ ಕೊಳಚ ನಿರ್ಮೂಲನ ಮಂಡಳಿಯವರಿಂದ ನಿರ್ಮಿಸಲಾಗುವ ಮನೆಯ ವೆಚ್ಚ ರೂ 1 25 ಲಕ್ಷಗಳಾಗಿದೆ

ಈ) ಅದರಲ್ಲಿ ಫಲಾನುಭವಿಯ ಮತ್ತು ರಾಜ್ಯ ಸರ್ಕಾರದ ಪಾಲು ಎಷ್ಟು?

ನಗರಗಳು	ಅನುಷ್ಠಾನ ಸಂಸ್ಥೆ	ರಾಜ್ಯ ಸರ್ಕಾರದ ಪಾಲು	ಫಲಾನುಭವಿಗಳ ಪಾಲು	ಸ್ಥಳೀಯ ಸಂಸ್ಥೆಯ ಪಾಲು
ಬೆಂಗಳೂರು	ಕ ಕೊ ನಿ ಮ	39 37%	10 63%	–
ಮೈಸೂರು	ಕ ಕೊ ನಿ ಮ	15 75%	4 75%	–